ಶ್ರೀಮನ್ ಮೈಸೂರು ಶ್ರೀ ಕೃಷ್ಣರಾಜ ಭೂಪಾಲಕರ ಆಳ್ವಿಕೆಯ
ದಿವಾಕರವರಾದ ಶ್ರೀಮನ್ ಎ. ರಾಜಕುಮಾರ
ಬನರ್ಜಿಯವರ ಸನ್ನಿಧಾನದಲ್ಲಿ.

ಮೈಸೂರು ಸಂಸ್ಥಾನದ ಶಾನುಭಾಗರ ಸಂಘದ ಆನರರಿ ಸೆಕ್ರಿಟರಿ ಎಕ್. ಲಕ್ಷ್ಮೀನರಸಪ್ಪ ವಿಧೇಯ ಮತ್ತು ವಿನಯಪೂರ್ವಕವಾಗಿ ಮಾಡುವ ವಿಜ್ಞಾಪನಾ, ಮಹಾಸ್ವಾಮಿ.

ಈ ನಮ್ಮ ಮೈಸೂರು ಸಂಸ್ಥಾನವೂ ಬಹುಕಾಲದ ಹಿಂದಣ ರಾಜರುಗಳಿಂದ ಆಳಲ್ಪಟ್ಟದ್ದಾಗಿರುವುದರಲ್ಲಿ, ವಂಶಪಾರಂಪರ್ಯವಾದ ಹಕ್ಕುದಾರಿ ಎಂದು ಹೆಸರ್ಗೊಂಡ ಶಾನುಭಾವಿಕೆ ನೌಕರಿಗಳು ನಾನಾ ತರಹವಾದ ನೇಮಕಗಳಿಗೆ ಒಳಗೊಂಡು ನಡೆದುಬಂದು ಇರುತ್ತದಷ್ಟೆ.

ಈ ಶಾನುಭಾವಿಕೆ ಗ್ರಾಮಗಳು ಮತ್ತು ಈ ನೌಕರಿಗಳಿಗೆ ಕೊಟ್ಟಿದ್ದ ಮಾನ್ಯಕ್ಷೇತ್ರಗಳು ಕ್ರಯ, ಭೋಗ್ಯ, ದಾನ ಮುಂತಾದ ಪರಿವರ್ತನೆಗಳ ಮೂಲಕ ಪರಭಾರೆಗಳು ಮಾಡಿಕೊಳ್ಳಲಾರಂಭಿಸಿದ್ದನ್ನು ಹಿಂದಿನಿಂದ ಸರಕಾರದವರು ಅಂಗೀಕರಿಸುತ್ತಾ ಬಂದರು.

1835 ನೇ ಇಸವಿ ಸೆಪ್ಟಂಬರ್‌ನಲ್ಲಿ ನಮ್ಮ ರಾಜ್ಯವನ್ನಾಳುತ್ತಿದ್ದ ಹಜರತ್ ಮೆಹರ್ಬಾಕ ಚೀಫ್ ಕಮಿಷರ್‌ವರು ಕೊಟ್ಟಿರುವ ಇಸ್ತಿಹಾರ್ನಾಮೆಯಲ್ಲಿ ಯಾರಾದರೂ ಶಾನುಭಾವಿಕೆ ನೌಕರಿಗಳನ್ನ ಪರಭಾರೆ ಮಾಡಿದ್ದರೆ, ಅವುಗಳನ್ನು ಒಂದು ವರ್ಷದ ಒಳಗಾಗಿ ಹಕ್ಕುದಾರರು ಬಿಡಿಸಿಕೊಳ್ಳಬೇಕೆಂದು ಮಗೈರೆ ನಿರ್ಣಯವನ್ನು ಡಿಟೋ ಇಸ್ತಿಹಾರ್ನಾಮೆ ಮೂಲಕ ಸಾದರು ಮಾಡಿದರು. ಈಚೆಗೆ 1872-73 ನೆ ಇಸವಿಯಲ್ಲಿ ಚೀಫ್ ಕಮಿಷರ್‌ರವರ 5 ನೆ ನಂಬರ್ ಸರ್ಕ್ಯುಲರ್‌ನಲ್ಲಿ ಪರಭಾರೆ ಮಾಡಕೂಡದೆಂದು ನಿಬಂಧಿಸಿದರು.

ಅಲ್ಲಿಂದೀಚೆಗೆ ಈವತ್ತಿನವರೆಗೂ ಹತೋಟಿಗೆ ಬಾರದೆ ಹದ್ದುಮೀರಿ ಹುಳುಂಗಳಿಗೂ, ಕಾಯಿದೆ ಕಾನೂನುಗಳಿಗೂ ವ್ಯತಿರಿಕ್ತವಾಗಿ,—

1. ಮಾನ್ಯಕ್ಷೇತ್ರಗಳು ವಿಭಾಗಿಸಿಕೊಳ್ಳೋಣವೂ,
2. ಕ್ರಯವಿಕ್ರಯಗಳು ಮಾಡೋಣವೂ,
3. ಸಂತತಿಯು ಪಾರಂಪರ್ಯವೆಂಬುವುದಕ್ಕೆ ವಿರುದ್ಧವಾದ ಅಭಿಪ್ರಾಯಗಳು ಕಲ್ಪಿಸೋಣವೂ,
4. ದಾಯಿಕ್ರರರ ಬಾಧ್ಯತೆ ಎಂಬೋಣವೂ,
5. ಹಿಸ್ಸೆದಾರರನ್ನು ಕಲ್ಪಿಸೋಣವೂ,
6. ಶಾನುಭಾವಿಕೆ ಗ್ರಾಮುಗಳ ನೌಕರಿಯನ್ನು ಹಂಚಿಕೊಡೋಣವೂ,
7. ಬಾರೀ ಪ್ರಕಾರ ಕೇಸು ಮಾಡಬೇಕೆಂಬುವುದೂ,
8. ಜಂಟಿ ಹಿಸ್ಸೆದಾರರೆಂದು ಒಬ್ಬನಿಗಿಂತ ಹೆಚ್ಚು ವಂದೀಯರ ಹೆಸರಿಗೆ ರಿಜಸ್ಟರು ಮಾಡೋಣವೂ,
9. ಸರ್ವಿಸ್ ಇನಾಮುಗಳು ಸರ್ವಿಸ್ಸಿಗೆ ಸಂಬಂಧಪಟ್ಟದ್ದಲ್ಲವೆಂದೋಣವೂ,
10. ಪೋಟಿಗಿ ವೊಬಲಗನ್ನ ಹಿಸ್ಸೆದಾರರಿಗೆ ಹಂಚಿಕೆ ಮಾಡಿಕೊಡಬೇಕೆಂದೋಣವೂ,
11. ವಿತಂತುಗಳ ಹೆಸರಿಗೆ ರಿಜಸ್ಟರು ಮಾಡೋಣವೂ,
12. ವಿತಂತುಗಳ ಹೆಸರಿಗೆ ರಿಜಸ್ಟರು ಮಾಡಿದಾಗ ಅಕೆ ಕಡೆ ಗುಮಾಸ್ತೆ ಆಕೆಯನ್ನು ಸಂರಕ್ಷಣೆ ಮಾಡಬೇಕೆಂದೋಣವೂ,
13. ಶಾನುಭಾವಿಕೆ ರಿಜಸ್ಟರು ಮಾಡುವಿಕೆ 50-60 ವರ್ಷಗಳಾದರೂ ತೀರ್ಮಾನವಿಲ್ಲದೆ ನಿಂತಿರೋಣವು.

ಈ ಪ್ರಕಾರವಾಗಿ ಸರಕಾರದವರು ತರಂಗತರಂಗವಾದ ಫೈಸಲಾತಿಗಳು ಮಾಡಿ ಹುಕುಂನಾಮೆಗಳು ಮಾಡಿದ್ದರಿಂದ ಈ ಶಾನುಭಾವಿಕೆ ನೌಕರಿಯು ಈಗಿನ ಕಾಲಕ್ಕೆ ಕೇವಲ ದಾರಿದ್ರ್ಯಾವಸ್ಥೆಗೆ ಒಂದು (1-4) (2-8) (3-8) (10) (12) ರೂಪಾಯಿಗಳು ಪ್ರಕಾರ ಪೋಟಿಗಿ ತೆಗೆದುಕೊಳ್ಳುವ ಶಾನುಭಾಗರೇ ಬಹು ಭಾಗ ಉಳಿದಿರುತ್ತಾರೆ. ಆದರೆ ಶಾನುಭಾಗರು

ಮಾಡಬೇಕಾದ ಸರಕಾರಿ ಕೆಲಸಗಳು, ಲೆಖ್ಖಪತ್ರಗಳು ಮಾತ್ರ ದಿನೇ ದಿನೇ ಹೆಚ್ಚುತ್ತಾ ಬಂದು, ಈಗಿನ ಕಾಲಕ್ಕೆ ಯಾವ ನಿರ್ಣಯವೂ ಇಲ್ಲದೆ ಅಯಾಯ ಗ್ರಾಮದ ಸರ್ವಕಾರ್ಯಗಳಿಗೂ ಶಾನುಭೋಗರನ್ನೇ ಮೇಲಿನ ಅಧಿಕಾರಿಗಳು ಗುರಿಮಾಡುತ್ತಾ ಇರುತ್ತಾರೆ.

ಇವರುಗಳು ಮಾಡಬಹುದಾದ ಸರ್ಕಾರಿ ಕೆಲಸಗಳಲ್ಲಿ ಸರ್ಕಾರಿ ಉದ್ಯೋಗಸ್ತರಿಗೆ ಇವರುಗಳಲ್ಲಿ ಗೌರವ ಇಲ್ಲದೇನೂ, ಜೀವನಾಭಾವದಿಂದ ಹೇಯವಾದ ಕೃತ್ಯಗಳು ನಡೆಸೋಣ, ಅದಕ್ಕೆ ಕೆಲವು ಉದ್ಯೋಗಿಗಳ ಸಹಾಯ ಪಡೆಯೋಣ ಈ ಪ್ರಕಾರವಾದ ನಡವಳಿಕೆಗಳಿಂದ ಇತರ ಮಾನ್ಯರಾದ ಶಾನುಭೋಗರೂ ಕೂಡ ಒಟ್ಟಿನಲ್ಲಿ ತಲೆತಗ್ಗಿ ಸಂಕೋಚಪಡಬೇಕಾಗಿರುವುದು.

ಶಾನುಭೋಗರುಗಳ ವೋಟಿಗಿ ಹೆಚ್ಚುವಿಕೆ ಇವರುಗಳು ಮಾಡತಕ್ಕ ಕೆಲಸಗಳ ನಿರ್ಣಯ, ಇವರುಗಳಿಗೆ ಉಂಟಾಗಿರತಕ್ಕ ಇತರ ಕಷ್ಟಗಳ ನಿವಾರಣ ಮುಂತಾದವುಗಳನ್ನ ಸರ್ಕಾರಕ್ಕೆ ತಿಳಿಸಿಕೊಳ್ಳುವುದಕ್ಕೋಸ್ಕರವೇ ಶಾನುಭೋಗರ ಸಂಘವೆಂದು ಏರ್ಪಡಿಸಿಕೊಂಡು ಏಳು ವರ್ಷಗಳ ಲಾಗಾಯಿತು ಪ್ರತಿ ವರ್ಷವೂ ಕಾನ್ಫರೆನ್ಸ್ ಮಾಡಿ ಈ ಕಾನ್ಫರೆನ್ಸಿಗೆ ನಮ್ಮ ಸರ್ಕಾರದಲ್ಲಿ ಉನ್ನತಪದವಿಯಲ್ಲಿ ಅಧಿಕಾರಗಳು ಮಾಡಿ, ನಮ್ಮ ದೇಶದ ಸಮಸ್ತ ಅಡಳಿತಗಳು ಅರಿತವರಾಗಿ ಪೇಷ್ ಪಡೆದು, ನಮ್ಮ ಶ್ರೀಮನ್ಮಹಾರಾಜರವರಿಂದಲೂ, ಇಂಡಿಯಾ ಗೌರ್ನಮೆಂಟಿನಿಂದಲೂ ಘನತರವಾದ ಬಿರುದು ಬಿರುದಾವಳಿಗಳು ಒಳಗೊಂಡಿರುವ ಮಹನೀಯರನ್ನ ಅಗ್ರಾಸನಾಧಿಪತಿಗಳಾಗಿ ಏರ್ಪಡಿಸಿಕೊಂಡು ಆವರಮುಖಾಂತರ ಶಾನುಭೋಗರುಗಳು-ತಮಗೆ ಉಂಟಾಗಿರುವ ಕುಂದುಕೊರತೆಗಳನ್ನು ಸರ್ಕಾರಕ್ಕೆ ತಿಳಿಸಿಕೊಳ್ಳುತ್ತಾ ಬಂದಿರುವ ವಿಷಯ ಘನತರವಾದ ಮಹಾ ಸನ್ನಿಧಾನಕ್ಕೆ ವರುಷಂಪ್ರತಿವರುಷವೂ ವಿದಿತವಾಗುತ್ತಲೇ ಇರುತ್ತೆ.

ಹೀಗೆ ತಿಳಿಸಿಕೊಂಡಿರುವ ವಿಷಯಗಳಿಗೆಲ್ಲಾ ಒಂದಕ್ಕೊಂದು ಸಂಬಂಧವಿಲ್ಲದೆ, ನ್ಯಾಯವಾಗಿ ಅಪ್ಪಣೆಕೊಡಿಸಬೇಕಾದ ವಿಷಯಗಳಿಗೂ ಕೂಡ ಈ ಶಾನುಭೋಗರ ದುರಾದೃಷ್ಟ ವಶಾತ್ ವಿಧವಿಧವಾದ ಮತ್ತು ನಿರ್ಣಯವಲ್ಲದ ಹುಳ್ಳುಂಗಳು ದಯವಾಲಿಸೋಣವೂ, ಅಥವಾ ಶಾನುಭೋಗರುಗಳ ವಾಗ್ದಾನೆಗಳಿಗೆ ಯಾವ ಗಮನವೂ-ಕೊಡದೆ ಇರೋಣವೂ ಈ ರೀತಿ ನಡವಳಿಕೆಯಲ್ಲಿ ಬಂದಿರುತ್ತೆ. ಇದರಿಂದ ಶಾನುಭೋಗರುಗಳಿಗೆ ಬಹಳ ಅಧೈರ್ಯವೂ, ಅಸಮಾಧಾನವೂ, ಅತೃಪ್ತಿಯೂ ಉಂಟಾಗುವುದಕ್ಕೆ ಆಸ್ಪದವಾಗಿ ಇರುತ್ತೆ.

ಹಿಂದೆ ನಡೆದ ವಿಷಯಗಳು ಹೇಗಾದರೂ ಇರಲಿ. ಈಗ ನಮ್ಮ ಸಂಸ್ಥಾನದಲ್ಲಿ 6421 ಸರ್ಕಲ್ ಯಾ ಛಾರ್ಜುಗಳು ವಿಂಗಡಿಸಿರುವುದರಲ್ಲಿ ಇಷ್ಟುಜನ ಶಾನುಭೋಗರುಗಳು ಇಲ್ಲದಿದ್ದಾಗ್ಯೂ 5 ಸಾವಿರ ಜನಕ್ಕೆ ಕಮ್ಮಿಯೇ ಇಲ್ಲಾ.

ಮುಂದೆ ಈ ಶಾನುಭೋಗರೇ ಮೊದಲಾಗಿ ಗ್ರಾಮ ಉದ್ಯೋಗಸ್ತರನ್ನೂ ಮತ್ತು ಗ್ರಾಮನಿವಾಸರನ್ನೂ ಒಳ್ಳೆಸ್ಥಿತಿಯಲ್ಲಿ ಇಟ್ಟುಕೊಂಡು ಗ್ರಾಮಾಡಳಿತಗಳು ಸರಿಯಾಗಿ ನಡೆಸುವವರನ್ನ ಅಭಿವೃದ್ಧಿಸ್ಥಿತಿಯಲ್ಲಿ ಕಂದರೆ, ರಾಜ್ಯಾಡಳಿತಗಳು ಸರಿಯಾಗಿ ನಡೆಯುವುದೆಂಬುವುದನ್ನ ಚಿತ್ತಕ್ಕೆತಂದು ಈ ಶಾನುಭೋಗರುಗಳನ್ನ ಯಾವ ಸ್ಥಿತಿಗೆ ತರಬೇಕು? ಇವರ ವೇತನ ಎಷ್ಟುಮಟ್ಟಿನದಾಗಿರಬೇಕು? ಎಂಬ ವಗೈರೆ ವಿಷಯಗಳು ರೆವಿನ್ಯೂ ಮ್ಯಾನ್ಯುಯಲ್ ಪ್ರಥಮ ಪೀಠಿಕೆಯಲ್ಲಿಯೂ ಮತ್ತು ವಿಲೇಜ್ ಆಫೀಸರರ ರೆಜುಲ್ಯೂಷನ್ನಲ್ಲಿಯೂ ಉದಹರಿಸಿರುವ ಪ್ರಕಾರ ಗ್ರಾಮಗಳನ್ನ ಒಟ್ಟುಕೂಡಿಸುವ ವಗೈರೆ ವಿಷಯಗಳು ನಡವಳಿಕೆಗೆ ತರುವುದೇ ನಿಜವಾಗಿದ್ದು, ಆ ಪ್ರಕಾರ ಮಾಡುವುದಾದರೆ ಹೇಗೆ ಮಾಡಬೇಕೆಂಬುವುದು, ಹಾಗೆ ಮಾಡಿದ್ದರಿಂದ,—

1 ನಮ್ಮ ಸರ್ಕಾರದವರು ಯಾವ ಕಾಯಿದೆ ಕಾನೂನು ಮಾಡಬೇಕಾಗಿದ್ದರೂ ಇತರ ದೇಶದ ಕಾಯಿದೆ ಕಾನೂನು ಹೋಲಿಸಿ ಮಾಡುತ್ತಿರುವ ಹಾಗೆ ಮದರಾಸ್ ಪ್ರೀಮೆಯಲ್ಲಿರುವ ಶಾನುಭೋಗರ ಸ್ಥಿತಿ ಹೇಗೆ ಇರುತೆತ್ತೋ ಹಾಗೆ ನಮ್ಮ ಪ್ರೀಮೆಯು ಶಾನುಭೋಗರ ಸ್ಥಿತಿ ನಟ್ಟಿಗೆ ಇಡುವುದು.

2 ಮೂಲಪುರುಷರ ಸಂತತಿಗೆ ಹಕ್ಕುದಾರಿಗಳು ಹೋಗಲಾಡಿಸದೆ ಸ್ಥಿರಪಡಿಸುವುದು.

3 ಲೆಖ್ಖದಲ್ಲಿ ಮಾತ್ರ ಇನಾಂ ಹೆಡ್ಡಿನಲ್ಲಿ ಇನಾಂಭೂಮಿಗಳನ್ನ ಖಾಯಂ ಇಟ್ಟು ಕೆಲಸಮಾಡತಕ್ಕವರಿಗೆ (ಕವಡಿ) ಯಷ್ಟು ಪ್ರಯೋಜನವೂ ಇಲ್ಲದೆ ಹೆಸರುಮಾತ್ರಕ್ಕೆ ಇನಾಂ ಎಂದು ಇರುವ ಇನಾಂಗಳ ಸ್ಥಿತಿ ಏನಾಗಬೇಕೆಂಬುವುದು.

4 ವಂಶವಾರಂಪರ್ಯವೆಂಬುವ ಸಂತತಿಕ್ರಮ ಹೇಗೆ ಪರ್ಯವಸಾನ ಹೊಂದಬೇಕೋ ಆ ವಿಚಾರವೂ.

ಇಂಥಾ ಮುಖ್ಯವಾದ ವಿಷಯಗಳು ನಿರ್ಣಯಿಸಿ ಎಲ್ಲಾ ಭಾಗಗಳಲ್ಲಿಯೂ ಒಂದು ತೃಪ್ತಿಕರವಾದ ತೀರ್ಮಾನ ಮಾಡುವುದಕ್ಕೆ ಸರ್ಕಾರಿ ಪ್ರಮುಖ ಉದ್ಯೋಗಸ್ತರಿಗೆ ಅವರವರ ಚಾಲ್ತಿಕೆಲಸಗಳಿಂದ ವಿರಾಮವಾಗುವುದಿಲ್ಲ. ಈ ವಿಷಯಗಳು ಮಾಹಿತಿಗೂ ಬರುವುದು ಸುಲಭಸಾಧ್ಯವೂ ಅಲ್ಲ.

ಆದುದರಿಂದ ಈ ವರುಷದ ಸೆಪ್ಟಂಬರ್ ತಿಂಗಳು ಆ ಸುಮಾರಿನಲ್ಲಿ ನಡೆಯುವ ನಮ್ಮ ಶಾಸನಭಾಗರ ಕಾರ್ಫರೆನ್ಸು ವೇಳೆಗೆ ಸರಕಾರದವರು ದಯವಿಟ್ಟು ಒಂದು ಕಮಿಟಿ ಏರ್ಪಡಿಸಿ ಆ ಕಮಿಟಿಗೆ ಬೆಂಗಳೂರಲ್ಲಿ ಇರುವಂಥಾ ಸರ್ಕಾರದವರಿಗೆ ಸೂಕ್ತ ತೋರುವ ಪೆಕ್ಷರ ಆಫೀಸರವರು ಮತ್ತು ಸರ್ಕಾರದ ಉದ್ಯೋಗಸ್ತರನ್ನು ನೇಮಿಸಿ ಈ ಶಾಸನಭಾಗರ ಉಪಯುಕ್ತವಾದ

1 ಮುಂದೆ ಸಾರೋದ್ಧಾರವಾಗಿ ಜೀವನದ ಕೊರತೆ ಇಲ್ಲದಂತೆಯೂ,

2 ಹಳ್ಳುದಾರಿಗಳು ಹೋಗದಂತೆಯೂ,

3 ಸರಕಾರದ ಕೆಲಸಗಳು ಸಲೀಸ್ ನಡೆಯುವಂತೆಯೂ,

4 ಗ್ರಾಮಗಳು ಹೀನಸ್ಥಿತಿಗೆ ಬಾರದಂತೆಯೂ,

5 ರೈತರು ನೆಮ್ಮದಿಯಾಗಿರುವಂತೆಯೂ

ಈ ವಿಷಯ ಮತ್ತು ಸೂಕ್ತತೋರುವ ವಿಷಯ ಸೂಚನೆಯ ಏರ್ಪಾಡಿನಿಂದ ಕಮಿಟಿ ಫಾಮೇಷನ್ ಮಾಡಿಸಿ ಈ ಸಂಘದ ಕಾರ್ಫರೆನ್ಸು ನಡೆಯುವ ವೇಳೆ ಅನೇಕಜನ ಶಾನುಭಾಗರುಗಳು ಒರುತ್ತಾರಾಗಿ ಅವರುಗಳ ಅಭಿಪ್ರಾಯವನ್ನು ಈ ಕಮಿಟಿಯವರು ತೆಗೆದುಕೊಂಡು ನಂತರ ಆ ಕಮಿಟಿಯ ತೀರ್ಮಾನದಂತೆ ಶಾನುಭಾಗರ ಸ್ಥಿತಿ ನೆಟ್ಟಗೆ ಇಟ್ಟು ನಡವಳಿಕೆಗೆ ಒರುವ ಏರ್ಪಾಡು ನಡೆಸಿದರೆ ಶಾನುಭಾಗರುಗಳು ಧನ್ಯರಾಗುತ್ತಾರೆ.

ಶಾನುಭಾಗರುಗಳಿಗೆ ಸಂಬಂಧಪಟ್ಟ ಕೆಲವು ಮುಖ್ಯ ವಿಷಯಗಳು ನಮ್ಮ ಸಂಸ್ಥಾನದ ರೆವೆನ್ಯೂ ಕಮಿಷರ್‌ರವರಿಗೆ 21–11–21 ನೇ ವರ್ಷದಲ್ಲಿ ರವಾನಿಸಿ ಇರುವ ವಿಜ್ಞಾಪನಾಪತ್ರದಲ್ಲಿ ವಿಸ್ತಾರವಾಗಿ ತಿಳಿಯಪಡಿಸಿಕೊಂಡು ಅನಂತರ ಅವರ ಅಪ್ಪಣೆಪಡೆದು ಡೆಪ್ಯುಟೇಷನ್ ರೂಪಕವಾಗಿ ಆ ಅಂಶಗಳನ್ನು ರೆವಿನ್ಯೂ ಕಮಿಷರ್‌ರವರಿಗೆ ಸಮರ್ಪಕವಾಗಿ ಅರಿಕೆಮಾಡಿಕೊಂಡ ದ್ದರಮೇಲೆ ಈ ಭಾಗದಲ್ಲಿ ತೃಪ್ತಿಕರವಾದ ಏರ್ಪಾಟು ಆಗಲು ಗೌರ್ನಮೆಂಟಿಗೆ ಬರೆಸುವುದಾಗಿ ಅಪ್ಪಣೆ ಕೊಡಿಸಿರುತ್ತಾರೆ. ಈ ಪತ್ರಿಕೆಯನ್ನ ಪರಾಂಬರಿಸಿ ಶಾನುಭಾಗರ ಪಂಗಡವನ್ನ ಉತ್ತಮ ಸ್ಥಿತಿಗೆ ತಂದರೆ ನಮ್ಮನ್ನಾಳುವ ಶ್ರೀಮತ್ ಮಹಾರಾಜರವರ ಶ್ರೇಯಃಪ್ರಾರ್ಥನೆ ಮಾಡುತ್ತಾ ಅವರ ಆಯುರಾರೋಗ್ಯಾತಿಶಯಗಳನ್ನು ಬಯಿಸುತ್ತಾ ನಮ್ಮ ಅನೂಚಾನ ಸಂತತೀ ಕ್ರಮವಾಗಿ ಬಂದಿರುವ ರಾಜಭಕ್ತಿವಿಶ್ವಾಸಕ್ಕೆ ಒಳಗೊಂಡು ಸರ್ವದಾ ಭಗವತ್ಪ್ರಾರ್ಥನೆಯಲ್ಲಿ ಇರುತ್ತೇವೆ, ಸ್ವಾಮಿ.

ಈ ವರ್ಷದ ಕಾರ್ಫರೆನ್ಸ್ ಏರ್ಪಾಟುಗಳು ನಡೆಯಬೇಕಾಗಿರುವುದ್ದರಿಂದ ಈ ಪತ್ರಿಕ್ಷೆಯಲ್ಲಿ ಪ್ರಾರ್ಥಿಸಿಕೊಂಡಿರುವ ಅಂಶಗಳಿಗೆ ಒಂದು ತಿಂಗಳ ಮುಂಚಿತವಾಗಿಯೇ ಅನುಜ್ಞೆ ಕೊಡಿಸಬೇಕೆಂದು ಸಂಘದ ಪರವಾಗಿ ಪ್ರಾರ್ಥಿಸಿ ಇರುತ್ತೇನೆ.

Accepted
ಆಕಾರ-ಶಿಸ್ತು-ತಿರ
13-7-23.

ಕೆ. ವಿ. ವಿ. ಪ್ರೆಸ್, ಮೈಸೂರು.